ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 918

ಸದಸ್ಯರ ಹೆಸರು : ಶ್ರೀ ಯು.ಬಿ.ವೆಂಕಟೇಶ್(ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 20.09.2021

ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪ್ರಾಥಮಿಕ ಹಂತದಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಸರ್ಕಾರ ಯೋಜನೆಗಳನ್ನು ಹಮ್ಮಿಕೊಂಡಿದೆಯೇ;	ಹೌದು. ಈ ಕೆಳಕಂಡ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. 1. ಪೂರ್ವ ಪ್ರಾಥಮಿಕ ಹಂತದಿಂದ 12ನೇ ತರಗತಿಯವರೆಗೂ ಗುಣಮಟ್ಟದ ಶಿಕ್ಷಣವನ್ನು ಒಂದೇ ಸೂರಿನಡಿ ನೀಡಲು 276 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಸದರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಉಭಯ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲಾಗಿದೆ. 2. 2400 ಸರ್ಕಾರಿ ಶಾಲೆಗಳಲ್ಲಿ ಉಭಯ ಮಾಧ್ಯಮದ ತರಗತಿಗಳನ್ನು ಪ್ರಾರಂಭಿಸಿ ಸದರಿ ತರಗತಿಗಳನ್ನು ನಿರ್ವಹಿಸಲು ಪಠ್ಯಕ್ರಮ, ಶಿಕ್ಷಕರ ತರಬೇತಿ, ಕಲಿಕೋಪಕರಣಗಳ ಇತ್ಯಾದಿ ಸಿದ್ಧಪಡಿಸಿ ನೀಡಲಾಗಿದೆ. 3. 74 ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ 6 ರಿಂದ 10ನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕೇಂದ್ರಿಯ ವಿದ್ಯಾಲಯ ಮಾದರಿಯಲ್ಲಿ ಆದರ್ಶ ವಿದ್ಯಾಲಯಗಳು(ಮಾದರಿ ಶಾಲೆಗಳು) ಪ್ರಾರಂಭಿಸಲಾಗಿದೆ. 4. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಲು 86 ವಸತಿ ನಿಲಯಗಳನ್ನು ಪ್ರಾರಂಭಿಸಲಾಗಿದೆ. ಸದರಿ ವಸತಿ ನಿಲಯಗಳಲ್ಲಿ ಯೋಗ, ಕರಾಟೆ, ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 5. 6ರಿಂದ 8ನೇ ತರಗತಿಯವರೆಗೆ ಗಣಿತ ಮತ್ತು ವಿಜ್ಞಾನ ವಿಷಯಕ್ಕೆ ಎನ್.ಸಿ.ಇ.ಆರ್.ಟಿ ಪಠ್ಯವಸ್ತುವಿನ ಪಠ್ಯಪುಸ್ತಕಗಳನ್ನು ಜಾರಿಗೊಳಿಸಲಾಗಿದೆ. 6. ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಇಂಗ್ಲೀಷ್ ನಲಿ-ಕಲಿ ಜಾರಿಗೊಳಿಸಲು ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ. 7. 2020-21ನೇ ಸಾಲಿನಲ್ಲಿ ಎನ್.ಸಿ.ಇ.ಆರ್.ಟಿ ವತಿಯಿಂದ 1 ರಿಂದ 8ನೇ ತರಗತಿ ಬೋಧಿಸುವ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನಿಷ್ಠಾ 1.0 ಆನ್‌ಲೈನ್ ತರಬೇತಿಯನ್ನು 1,46,487 ಶಿಕ್ಷಕರಿಗೆ ನೀಡಲಾಗಿದೆ. ಕಳೆದ ಸಾಲಿನಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ವೃತ್ತಿಪರ ನಲಿ-ಕಲಿ, ಜೀವನ ಕೌಶಲ ತರಬೇತಿಯನ್ನು

ಮುಖಾಮುಖಿ ಮತ್ತು ಆನ್‌ಲೈನ್ ಮುಖಾಂತರ ಒಟ್ಟು 1,21,933 ಶಿಕ್ಷಕರಿಗೆ ತರಬೇತಿ ನೀಡಲಾಗಿದೆ.

8. 2021-22ನೇ ಸಾಲಿನಲ್ಲಿ ಎನ್.ಸಿ.ಇ.ಆರ್.ಟಿ ವತಿಯಿಂದ ರಾಜ್ಯದಲ್ಲಿ 1 ರಿಂದ 05ನೇ ತರಗತಿ ಬೋಧಿಸುವ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಶಾಲಾ 51056 ಶಿಕ್ಷಕರಿಗೆ ನಿಷ್ಠಾ-3 ತರಬೇತಿಯನ್ನು ಅಕ್ಟೋಬರ್ 01 ರಿಂದ ಅನುಷ್ಠಾನಗೊಳಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.
9. 1 ರಿಂದ 8ನೇ ತರಗತಿ ಬೋಧಿಸುವ ಶಿಕ್ಷಕರಿಗೆ 2019-20ನೇ ಸಾಲಿನಲ್ಲಿ 57425 ಶಿಕ್ಷಕರಿಗೆ ಗುರುಚೇತನ ಕಾರ್ಯಕ್ರಮದಡಿ ವೃತ್ತಿ ಸಾಮರ್ಥ್ಯಾಭಿವೃದ್ಧಿ ತರಬೇತಿ ನೀಡಲಾಗಿದೆ.
10. ರಾಜ್ಯದಲ್ಲಿ ಪ್ರಾರಂಭಿಸಿರುವ ಆಂಗ್ಲ ಮಾಧ್ಯಮ ತರಗತಿಗಳಲ್ಲಿ ಬೋಧಿಸುವ ಶಿಕ್ಷಕರಿಗೆ 2019-20ನೇ ಸಾಲಿನಲ್ಲಿ 1654 ಶಿಕ್ಷಕರಿಗೆ, 2020-21ನೇ ಸಾಲಿನಲ್ಲಿ 1932 ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ.
11. ಪೋಷಕರಿಗೆ ಅವರ ಮಕ್ಕಳ ಕಲಿಕಾ ಪ್ರಗತಿ ಮನದಟ್ಟು ಮಾಡಲು ಹಾಗೂ ಸಮುದಾಯವನ್ನು ಶಾಲೆಗೆ ಹತ್ತಿರವಾಗಿಸಲು ಮತ್ತು ಶಾಲೆಯಲ್ಲಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಲು **'ಸಮುದಾಯದತ್ತ ಶಾಲಾ'** ಕಾರ್ಯಕ್ರಮ ಜಾರಿಯಲ್ಲಿದೆ.

ಆ) 2019-20, 2020-21 ಮತ್ತು 2021-22ರ ಅವಧಿಯಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ ನಿಧಿ ಎಷ್ಟು ಬಳಕೆ ಆಗಿರುವುದು ಎಷ್ಟು;

2019-20, 2020-21 ಮತ್ತು 2021-22ನೇ ಸಾಲುಗಳಿಗೆ ಆಯವ್ಯಯ ಹಂಚಿಕೆ ಹಾಗೂ ಬಳಕೆ ಮಾಡಲಾಗಿರುವ ಅನುದಾನಗಳ ವಿವರಗಳು ಈ ಕೆಳಕಂಡಂತಿದೆ.

ರೂ.ಕೋಟಿಗಳಲ್ಲಿ

ಕ್ರ ಸಂ.	**ವರ್ಷ**	**ಆಯವ್ಯಯ ನಿಗಧಿ**	**ಬಿಡುಗಡೆಯಾದ ಅನುದಾನ**	**ಬಳಕೆ ಮಾಡಿರುವ ಅನುದಾನ**
1	2019-20	22,997.14	22,997.14	22,775.50
2	2020-21	23,695.69	23,457.66	21,584.74
3	2021-22 (ಆಗಸ್ಟ್-2021ರ ವರೆಗೆ)	24,886.18	16,070.85	8,025.91

ಇ) ಪ್ರಾಥಮಿಕ ಶಾಲೆಗಳಿಗೆ ಅಂತರ್ಜಾಲ ಸೇರಿದಂತೆ ಮೂಲಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

1. ಸರ್ಕಾರಿ ಶಾಲೆಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಪಂಚಾಯತ್ ರಾಜ್ ಇಲಾಖೆಯ ಸಹಯೋಗದೊಂದಿಗೆ "ಜಲ ಜೀವನ್ ಮಿಷನ್" ಕಾರ್ಯಕ್ರಮದ ಮೂಲಕ ಒಟ್ಟು 42015 ಸರ್ಕಾರಿ ಶಾಲೆಗಳ ಪೈಕಿ 41,607 ಶಾಲೆಗಳಿಗೆ (ಶೇ.99) ಟ್ಯಾಪ್ ವಾಟರ್ ವ್ಯವಸ್ಥೆ ಮಾಡಲಾಗಿದೆ. (ಅನುಬಂಧ-1ರಲ್ಲಿ ಪಂಚಾಯತ್ ರಾಜ್ ಇಲಾಖೆಯ ಮಾಹಿತಿ ಲಗತ್ತಿಸಿದೆ)

2. ಕೇಂದ್ರ ಸರ್ಕಾರದ ಜಲಶಕ್ತಿ ಮಂತ್ರಾಲಯವು ಜಲ ಜೀವನ್ ಮಿಶನ್ ಅಡಿಯಲ್ಲಿ ಶಾಲೆಗಳಿಗೆ ಕೊಳವೆ ನೀರು ಸರಬರಾಜು ಮಾಡುವ ಬಗ್ಗೆ 100 ದಿನಗಳ ಅಭಿಯಾನ ಹಮ್ಮಿಕೊಳ್ಳಲಾಗಿತ್ತು ಕುಡಿಯುವ ನೀರು, ಮಧ್ಯಾಹ್ನದ ಉಪಹಾರ ಸಿದ್ಧಪಡಿಸಲು, ಕೈತೊಳೆಯಲು ಮತ್ತು ಶೌಚಾಲಯಗಳಿಗೆ ಬಳಸುವ ಉದ್ದೇಶಗಳಿಗಾಗಿ ಅಂಗನವಾಡಿ ಕೇಂದ್ರಗಳು, ಆಶ್ರಮ ಶಾಲೆಗಳು ಮತ್ತು ಶಾಲೆಗಳಿಗೆ ಕೊಳವೆ ನೀರು ಸೌಲಭ್ಯ ಒದಗಿಸುವ ಉದ್ದೇಶದೊಂದಿಗೆ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿರುತ್ತದೆ. "ಜಲ್ ಜೀವನ್" ಕಾರ್ಯಕ್ರಮದ ಮುಖೇನ 10894 ಸರ್ಕಾರಿ ಶಾಲೆಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.(ಅನುಬಂಧ-2ರಲ್ಲಿ ಮಾಹಿತಿ ಲಗತ್ತಿಸಿದೆ.)

ಅಲ್ಲದೇ, ಸರ್ಕಾರಿ ಶಾಲಾ/ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

1. ಆರ್.ಐ.ಡಿ.ಎಫ್-25 ಅಡಿಯಲ್ಲಿ ಅಧಿಕ ಮಳೆಯಿಂದ ಹಾನಿಯಾದ 3386 ಸರ್ಕಾರಿ ಶಾಲೆಗಳ 6469 ಕೊಠಡಿಗಳ ಮರು ನಿರ್ಮಾಣಕ್ಕಾಗಿ ರೂ.75807.30 ಲಕ್ಷಗಳ ಅನುದಾನವನ್ನು ಒದಗಿಸಿದೆ. ಕಾಮಗಾರಿ ಪ್ರಗತಿಯಲ್ಲಿದೆ.
2. 2019-20ನೇ ಸಾಲಿನಲ್ಲಿ ಮಳೆಯಿಂದ ಹಾನಿಗೊಳಗಾದ 6196 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ 13260 ಕೊಠಡಿಗಳ ದುರಸ್ಥಿಗೆ ರೂ.19951.75 ಲಕ್ಷಗಳ ಅನುದಾನದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಕ್ರಮ ಕೈಗೊಳ್ಳಲಾಗಿದೆ.
3. 2020-21ನೇ ಸಾಲಿನಲ್ಲಿ ಅತಿವೃಷ್ಟಿ/ಪ್ರವಾಹದಿಂದ ಹಾನಿಗೀಡಾದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ತುರ್ತು ದುರಸ್ಥಿಗೆ ರೂ.7557.99 ಲಕ್ಷಗಳ ಅನುದಾನದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಕ್ರಮ ಕೈಗೊಳ್ಳಲಾಗಿದೆ.
4. 2020-21ನೇ ಸಾಲಿನಲ್ಲಿ ಶಾಲೆಗಳಿಗೆ ಅವಶ್ಯವಿರುವ ಶೌಚಾಲಯ, ಆಟದ ಮೈದಾನ, ಅಡುಗೆ ಕೋಣೆ ಮತ್ತು ಕೈತೋಟ ನಿರ್ಮಾಣಕ್ಕಾಗಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ ರೂ.2920.99 ಲಕ್ಷಗಳ ಅನುದಾನದಲ್ಲಿ ಕಾಮಗಾರಿ ಕೈಗೊಳ್ಳಲಾಗಿದೆ.
5. 2020-21ನೇ ಸಾಲಿನಲ್ಲಿ ಕುಡಿಯುವ ನೀರು ಮತ್ತು ಶೌಚಾಲಯ ವಾರ್ಷಿಕ ನಿರ್ವಹಣೆಗಾಗಿ ರಾಜ್ಯದ 48012 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಒಟ್ಟು ರೂ.2929.80 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.
6. ಕೇಂದ್ರ ಸರ್ಕಾರ ಪುರಸ್ಕೃತ ಸಮಗ್ರ ಶಿಕ್ಷಣ- ಕರ್ನಾಟಕ ಯೋಜನೆಯಡಿ 18 ಜಿಲ್ಲೆಗಳಲ್ಲಿ 83 ಹೊಸ ಶಾಲಾ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ರೂ.112.34 ಕೋಟಿಗಳ ಅನುದಾನದೊಂದಿಗೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.
7. ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದ ಆದೇಶದಂತೆ ಸರ್ಕಾರಿ ಶಾಲೆಗಳಿಗೆ

		ಮೂಲಭೂತ ಸೌಕರ್ಯ ಒದಗಿಸಲು ವಿವಿಧ ಕಾಮಗಾರಿಗಳಿಗೆ ಒಟ್ಟು ರೂ.8826.95 ಲಕ್ಷಗಳ ಅನುದಾನ ಒದಗಿಸಿ ಕ್ರಮಕೈಗೊಳ್ಳಲಾಗಿದೆ. 8. 276 ಕರ್ನಾಟಕ ಪಬ್ಲಿಕ್ ಶಾಲೆಗಳ ಪೈಕಿ 100 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ತಲಾ ರೂ.2.00 ಕೋಟಿಯಂತೆ ಮೂಲಭೂತ ಸೌಕರ್ಯ ಒದಗಿಸಲು ಒಟ್ಟು ರೂ.200 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. 9. ರಾಜ್ಯದ ಸರ್ಕಾರಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಪೀಠೋಪಕರಣಗಳನ್ನು ಒದಗಿಸಲು ರೂ.50ಕೋಟಿಗಳ ಅನುದಾನ ಒದಗಿಸಲಾಗಿದೆ.. 10. 2021-22ನೇ ಸಾಲಿನಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಹಿಂದುಳಿದ 114 ತಾಲ್ಲೂಕುಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಕೊಠಡಿ ನಿರ್ಮಾಣ ಕಾಮಗಾರಿಗಳಿಗಾಗಿ ರೂ.75.00ಕೋಟಿ ಅನುದಾನ ಒದಗಿಸಲಾಗಿದೆ. 11. 2021-22ನೇ ಸಾಲಿನಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ ಅಮೃತ ಶಾಲಾ ಸೌಲಭ್ಯ ಯೋಜನೆಯಡಿ ಆಯ್ದ 750 ಶಾಲೆಗಳಿಗೆ ಪ್ರಯೋಗಾಲಯ, ಗ್ರಂಥಾಲಯ, ಶೌಚಾಲಯ ಇತ್ಯಾದಿ ಸಮಗ್ರ ಸೌಲಭ್ಯ ಒದಗಿಸಲು ರೂ.75 ಕೋಟಿಗಳ ಅನುದಾನ ಒದಗಿಸಿದೆ.

ಇಪಿ 141 ಎಂ.ಹೆಚ್.ಟಿ 2021

(ಬಿ.ಸಿ.ನಾಗೇಶ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

ಹಾಗೂ ಸಕಾಲ ಸಚಿವರು

Annexure-1

Jal Jeevan Mission – Har Ghar Jal

District	Total schools	Schools with tap water supply	Schools with tap water supply (%)
Bagalkote	1,180	1,180	100.00
Ballari	1,474	1,474	100.00
Bangalore Rural	1,036	1,036	100.00
Bengaluru Urban	637	637	100.00
Chamarajanagar	749	749	100.00
Chik Ballapur	1,449	1,449	100.00
Chikmagalur	1,437	1,437	100.00
Chitradurga	1,630	1,630	100.00
Dakshina Kannada	922	922	100.00
Davangere	1,059	1,059	100.00
Dharwad	602	602	100.00
Gadag	555	555	100.00
Hassan	2,344	2,344	100.00
Haveri	1,206	1,206	100.00
Kalaburagi	1,844	1,844	100.00
Kodagu	409	409	100.00
Koppal	950	950	100.00
Mandya	1,695	1,695	100.00
Mysuru	1,888	1,888	100.00
Raichur	1,326	1,326	100.00
Ramanagaram	1,237	1,237	100.00
Shivamogga	1,796	1,796	100.00

District	Total schools	Schools with tap water supply	Schools with tap water supply (%)
Tumkur	3,286	3,286	100.00
Udupi	636	636	100.00
Yadgir	883	883	100.00
Kolar	1,788	1,780	99.55
Belagavi	3,031	2,969	97.95
Uttara Kannada	1,973	1,926	97.62
Bidar	1,292	1,258	97.37
Vijayapura(bijapur)	1,701	1,637	96.24
Total	**42,015**	**41,800**	**99.49**

Annexure-2

100 Days campaign progress report

		As Reported by Dept..		As Reported by EE.											
Sl. No.	Type of Institution	No of Institutions	Tentative No. Institutions With no Tap Water connection to Toilets / Kitchen*	No of Institutions	Tentative No. Institutions Without Tap Water connection to Toilets / Kitchen*	No of Estimates Prepared	Estimated Cost (Rs in Lakhs)	No of Admin Approvals Issued	No of Work Order Issued	No of Works Completed	Expenditure Cost (Rs. in Lakhs)	% of Physical progress	% of Financial Progress	No of School Labs upgraded for checking Water Quality
1	3	4	5	6	7	8	9	10	11	12	13	14	15	16
1	Schools	42015	12718	45192	17418	17057	4426.74	16439	16252	10894	5.60	62.54	0.126504	120
2	Anganwadi Center	53901	27577	53048	32989	31488	5687.42	30569	29754	20611	34.80	62.48	0.611876	0
3	PU Colleges	767	0	571	379	66	26.14	17	17	2	0.00	0.00	0	0
4	Hostel Backward Classes	1221	102	1133	229	57	37.35	42	29	2	0.00	0.87	0	0
5	Hostel (Social Welfare)	893	96	972	145	47	47.83	30	24	2	0.00	1.38	0	0
6	Hostel (Triball Welfare)	106	29	180	19	13	3.37	13	11	2	0.00	10.53	0	0
7	Ashramshalas	115	13	185	68	12	3.61	10	7	2	0.00	2.94	0	0
8	Dept of Minority Welfare Institution	126	30	119	27	4	5.51	4	5	1	0.00	3.70	0	0
	Grand Total	99144	40565	101400	51274	48744	10237.97	47124	46099	31516	40.40	61.47	0.08	120